**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**CC 321/2019**

| | | |
|---|---|---|
| ಸಾಕ್ಷಿಯ ಹೆಸರುಃ | ರಾಜಶೇಖರ | **DW-1** |
| ತಂದೆಯ ಹೆಸರುಃ | ಬಸಪ್ಪ | |
| ವಯಸ್ಸುಃ | 45 ವರ್ಷ | ಪ್ರಮಾಣೀಕರಿಸಿದ<br>ದಿಃ 27/01/2026 |
| ಉದ್ಯೋಗಃ | ಕೂಲಿ ಕೆಲಸ | |
| ವಾಸ ಸ್ಥಳಃ | ಸುಬ್ಬಯ್ಯನ ಕೊಪ್ಪಲು, ಹಾರನಹಳ್ಳಿ ಹೋಬಳಿ, ಪಿರಿಯಾಪಟ್ಟಣ ತಾ | |

**ಮುಖ್ಯ ವಿಚಾರಣೆಃ** ಆರೋಪಿತರ ಪರ ವಕೀಲರಿಂದಃ

ನಾನು ಈ ಪ್ರಕರಣದ ಆರೋಪಿಯಾಗಿದ್ದೇನೆ. ಈ ಪ್ರಕರಣದ ವಿದ್ಯಮಾನ ಗೊತ್ತು. ನಾನು ವಿದ್ಯಾಭ್ಯಾಸ ಮಾಡಿಲ್ಲ. ಪಿರ್ಯಾದಿದಾರರು ನನ್ನ ವಿರುದ್ಧ ಚೆಕ್ ಕೇಸನ್ನು ಹೂಡಿದ್ದಾರೆ. ನಾನು ಪಿರ್ಯಾದುದಾರರಿಂದ ಕಾನೂನುಬದ್ಧ ಅವಶ್ಯಕತೆ ಮತ್ತು ವ್ಯಾಪಾರಕ್ಕಾಗಿ ರೂ. 2 ಲಕ್ಷ ಸಾಲ ಪಡೆದಿರಲಿಲ್ಲ. ನಾನು ಕುಶಾಲನಗರದ ವಿಜಯಬ್ಯಾಂಕ್ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರಲಿಲ್ಲ. ನನಗೆ ಪಿರ್ಯಾದುದಾರರ ವಕೀಲರಿಂದ ಯಾವುದೇ ನೋಟೀಸು ಬಂದಿರಲಿಲ್ಲ. ಸದರಿ ನೋಟೀಸು ತಲುಪಿದ ಬಗ್ಗೆ ಸಹಿ ಮಾಡಿ ಪಡೆದಿಲ್ಲ. ಚೆಕ್ ನಲ್ಲಿರುವ ಬರಹ ನನ್ನದಲ್ಲ. ನಾನು ಚೆಕ್ ಗೆ ಸಹಿ ಮಾಡಿಲ್ಲ. ಪಿರ್ಯಾದುದಾರರು ಚೀಟಿ ನಡೆಸುತ್ತಿದ್ದರು. ಆಗ ಅವರು ನನ್ನಿಂದ ಖಾಲಿ ಚೆಕ್ಕನ್ನು ಕೇಳಿ ಪಡೆದರು. ನಾನು ರೂ. 20 ಸಾವಿರ ಚೀಟಿ ಹಣವನ್ನು ಪಡೆದಿದ್ದು, ಪಿರ್ಯಾದುದಾರರಿಗೆ ಸದರಿ ಚೀಟಿಯ ಹಣವನ್ನು ತೀರಿಸಿದ್ದೆ. ನಾನು ಪೂರ್ತಿ ಹಣ ಸಂದಾಯ ಮಾಡಿ ಚೆಕ್ ವಾಪಸ್ಸು ನೀಡಲು ಕೋರಿದ್ದೆ, ಆದರೆ ಅವರು ವಾಪಸ್ಸು ನೀಡಿಲ್ಲ. ಪಿರ್ಯಾದುದಾರರು

ಬಡ್ಡಿ ವ್ಯವಹಾರ ಮಾಡುವುದು, ಜಮೀನು ಬರೆಸಿಕೊಳ್ಳುವುದು ಮಾಡುತ್ತಾರೆ. ಈಗ ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣದ ವ್ಯವಹಾರ ಇಲ್ಲ. ಪಿರ್ಯಾದುದಾರರು ಖಾಲಿ ಚೆಕ್ ಪಡೆದು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದಿಂದ ನನ್ನನ್ನು ಮುಕ್ತನಾಗಿಸಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ** ಪಿರ್ಯಾದುದಾರರ **ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.